# ಥ್ರಿಲ್ಲರ್ ಪರಿಧಿಯಾಚೆಗಿನ ರಾಧಿಕಾ...

**ಥ್ರಿಲ್ಲರ್ ಸಿನಿಮಾಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿರುವ ನಟಿ ರಾಧಿಕಾ ನಾರಾಯಣ್ ಅವರಿಗೆ ಹಾಸ್ಯ, ಡ್ರಮಾಟಿಕ್, ಎಮೋಷನ್ ಎಲ್ಲವನ್ನೂ ಒಂದಾಗಿಸಿಕೊಂಡ ಸಿನಿಮಾದಲ್ಲಿ ಅಭಿನಯಿಸುವ ಬಯಕೆ...**

■ ಸುಮಲತಾ ಎನ್.



ರಂಗಿತರಂಗ, ಕಾಫಿತೋಟ, ಯು–ಟರ್ನ್, ಚೇಸ್... ನಟಿ ರಾಧಿಕಾ ನಾರಾಯಣ್ ನಟನೆಯ ಸಿನಿಮಾ ಹಿನ್ನೆಲೆಯನ್ನೊಮ್ಮೆ ನೋಡಿದರೆ, ಪತ್ತೇದಾರಿ ಅಥವಾ ಥ್ರಿಲ್ಲರ್ ಜಾನರ್‌ನ ಸಿನಿಮಾಗಳೇ ಹೆಚ್ಚು ಕಾಣುತ್ತವೆ. ಈಚೆಗೆ ಬಿಡುಗಡೆಯಾದ 'ಶಿವಾಜಿ ಸುರತ್ಕಲ್ 2' ಸಿನಿಮಾ ಕೂಡ ಆ ಪಟ್ಟಿಗೆ ಹೊಸ ಸೇರ್ಪಡೆ.

ಕನ್ನಡದ ಥ್ರಿಲ್ಲರ್ ಸಿನಿಮಾಗಳಿಗೂ, ನಟಿ ರಾಧಿಕಾಗೂ ಏನಂಥ ನಂಟು? ಈ ಪ್ರಶ್ನೆಗೆ ನಗುತ್ತಲೇ ಉತ್ತರಿಸುತ್ತಾರೆ ರಾಧಿಕಾ.

'ಇದಕ್ಕೆ ಸಿನಿಮಾ ನಿರ್ದೇಶಕರೇ ಉತ್ತರಿಸಿದರೆ ಚೆಂದ. ಆ ಸಿನಿಮಾಗಳಿಗೆ ನಾನು ಹೆಚ್ಚು ಒಪ್ಪುತ್ತೇನೆ ಎಂದು ಅವರಿಗೆ ಅನಿಸಿರಬೇಕು. ನನ್ನ ಸಿನಿಮಾ ಪಯಣ ಶುರುವಾಗಿದ್ದೇ ಥ್ರಿಲ್ಲರ್ ಸಿನಿಮಾ ಮೂಲಕ. ಪತ್ತೇದಾರಿ ಚಿತ್ರಗಳಲ್ಲಿ ನಟಿಸುವುದು ಒಂದು ರೀತಿ ಸವಾಲಿನ ಕೆಲಸ. ಸ್ವಲ್ಪ ಹೆಚ್ಚೇ ಏಕಾಗ್ರತೆ ವಹಿಸಬೇಕು. ಎಲ್ಲೂ ತಪ್ಪದಂತೆ ಎಚ್ಚರವಹಿಸಬೇಕು. ವೀಕ್ಷಕರನ್ನು ಕೊನೆವರೆಗೂ ಥ್ರಿಲ್‌ನಲ್ಲಿ ಉಳಿಸಬೇಕು' ಎಂದು ವಿವರಣೆ ನೀಡುತ್ತಾರೆ.

ಹಾಗೆಂದು ತಮ್ಮನ್ನು ತಾವು ಒಂದೇ ಜಾನರ್‌ಗೆ ಸೀಮಿತಪಡಿಸಿಕೊಳ್ಳಲು ಇಷ್ಟಪಡುವುದಿಲ್ಲ ಎಂದು ಹೇಳುತ್ತಾರೆ. ಬೇರೆ ಬೇರೆ ಧಾಟಿಯ, ಬೇರೆ ಬೇರೆ ಅನುಭವ ನೀಡುವಂಥ ಪಾತ್ರಗಳಿಗೆ ಎಂದಿಗೂ ಆದ್ಯತೆ ನೀಡುವುದಾಗಿ ತಿಳಿಸುತ್ತಾರೆ.

'ಪತ್ತೇದಾರಿ ಸಿನಿಮಾಗಳಲ್ಲಿ ನಟಿಸುವುದು ಮಾತ್ರವಲ್ಲ, ನಾನೇ ಖುದ್ದಾಗಿ ಪತ್ತೇದಾರಿ ಪಾತ್ರ ನಿರ್ವಹಿಸಬೇಕೆಂಬ ಆಸೆ ಇದೆ. ಅಂಡರ್ ಕವರ್ ಏಜೆಂಟ್‌ನಂತೆ, ನಾನೇ ಪತ್ತೇದಾರಿಯಾಗಿರುವಂಥ ಪಾತ್ರ ಬೇಕು' ಎನ್ನುತ್ತಾರೆ.

ಇದರೊಂದಿಗೆ ಕಾಮಿಡಿ, ಆ್ಯಕ್ಷನ್, ಡ್ರಾಮಾ ಇರುವಂಥ ಭಾವನಾತ್ಮಕ ಸಿನಿಮಾಗಳಲ್ಲಿ ಕೂಡ ಹೆಚ್ಚು ಹೆಚ್ಚು ನಟಿಸಬೇಕು ಎನ್ನುವುದು ಅವರ ಆಶಯ. 'ಕಾಮಿಡಿ ಮಾಡುವುದು ಸುಲಭವಲ್ಲ. ಅದಕ್ಕೆ ಒಳ್ಳೆ ಟೈಮಿಂಗ್ ಸೆನ್ಸ್ ಇರಬೇಕು' ಎನ್ನುತ್ತಾರೆ.

'ನಾನು ಇದುವರೆಗೂ ನಿರ್ವಹಿಸಿದ ಪಾತ್ರಗಳಲ್ಲಿ ಹೆಚ್ಚಿನ ಸಿನಿಮಾ ಥ್ರಿಲ್ಲರ್ ಕಥಾಹಂದರದ್ದಾದರೂ, ಆ್ಯಕ್ಷನ್, ಡ್ರಮಾಟಿಕಲ್ ಸಿನಿಮಾಗಳಲ್ಲೂ ನಟಿಸಿದ್ದೇನೆ. 'ಚೇಸ್' ಸಿನಿಮಾದಲ್ಲಿ ಅಂಧಳಾಗಿ, ಆ್ಯಕ್ಷನ್ ಕೂಡ ಮಾಡಿದ್ದೇನೆ. 'ಮುಂದಿನ ನಿಲ್ದಾಣ'ದಲ್ಲಿ ಡ್ರಾಮಾ, ಎಮೋಷನ್ ಇದೆ. ಕ್ಯಾನ್ಸರ್ ಪೇಷೆಂಟ್ ಆಗಿ ಕಾಣಿಸಿಕೊಂಡಿದ್ದೇನೆ. 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಸಿನಿಮಾದಲ್ಲಿ ಸ್ವತಂತ್ರ ಆಲೋಚನೆಯ ಆಧುನಿಕ ಮಹಿಳೆಯ ಪಾತ್ರ ಮಾಡಿದ್ದೇನೆ. ಹೀಗೆ ಇಂಥ ಇನ್ನಷ್ಟು ಭಿನ್ನ ಕಥೆಯುಳ್ಳ ಸಿನಿಮಾಗಳಲ್ಲಿ ನಟಿಸಬೇಕು' ಎನ್ನುತ್ತಲೇ, 'ಕಾಮಿಡಿ, ಆ್ಯಕ್ಷನ್, ಡ್ರಾಮಾ ಇವೆಲ್ಲ ಅಂಶವನ್ನೂ ಒಳಗೊಂಡ ಸುಂದರ ಸ್ಕ್ರಿಪ್ಟ್‌ಗಾಗಿ